ಶ್ರೀ ಜೆ.ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ 'ಜಾಗೃತಿ ವಿಭಾಗ' ಎಂಬ ಶಾಖೆಯನ್ನು ತೆಗೆದಿದ್ದಾರೆ. ಆದರೆ ಪರವಾನಗಿ ಪಡೆಯದೆ ಸಾಗಾಣಿಕೆ ಮಾಡುತ್ತಿದ್ದ ಗಣ್ಯ ವ್ಯಕ್ತಿಗಳನ್ನು ಏನಾದರೂ ಪತ್ತೆ ಹಚ್ಚಿದ್ದೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿಯವರೆಗೆ ಜಾಗೃತಿ ಇಲಾಖೆ ಇರಲಿಲ್ಲ, ಸಿಬ್ಬಂದಿ ಇರಲಿಲ್ಲ. ಈಗ ಜಾಗೃತಿ ಇಲಾಖೆಯನ್ನು ಪ್ರಾರಂಭ ಮಾಡಿ, ಸಿಬ್ಬಂದಿ ಎಲ್ಲಾ ಕೊಟ್ಟು ಎಲ್ಲಾ ಗಣಿಗಳಿಗೆ ಕಾವಲು ಇಡತಕ್ಕ ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಜಿ. ಬಣಕಾರ್.—ಪರವಾನಗಿ ಇಲ್ಲದೆ ಇಲ್ಲಿಯವರೆಗೆ ಎಷ್ಟು ಸಾಗಾಣಿಕೆ ಮಾಡಿದ್ದಾರೆ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿಯವರೆಗೆ ಜಾಗೃತಿ ಶಾಖೆ ಇರಲಿಲ್ಲ. ಕೆಲವರು ಸಿಕ್ಕಿದ್ದಾರೆ, ಅವರ ಮೇಲೆ ಕೇಸ್ ಹಾಕಿದ್ದೇವೆ.

ಶ್ರೀ ಬಿ.ಜಿ. ಬಣಕಾರ್. - ಅವರ ಹೆಸರು ಹೇಳಿ?

ಶ್ರೀ ಎಸ್.ಆರ್. ಬೊಮ್ಮಾಯಿ —ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಗಣಿಗಳನ್ನು ನ್ಯಾಷನಲೈಸ್ ಮಾಡುತ್ತೇವೆಂದು ಹೇಳಿದಿರಿ, ಅದನ್ನು ಮಾಡಿಬಿಟ್ಟಿರೆ, ಈ ಸಮಸ್ಯೆ ಬರುವುದಿಲ್ಲ. ಮತ್ತೆ ಈ ಕಳ್ಳಸಾಗಾಣಿಕೆಯನ್ನು ಕಂಟ್ರೋಲ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ಈ ದಿಸೆಯಲ್ಲಿ ಕ್ರಮ ತೆಗೆದುಕೊಂಡಿದೆ.

ಶ್ರೀ ಜೆ ಎಸ್. ದೊಡ್ಡಮೇಟಿ.—ಹಾನಿಯ ವಿವರ ಏನು ಎಂದು ತಿಳಿಯಲಿಲ್ಲ. ರಾಯಲ್ಟಿ ಏನು ಕೊಟ್ಟಿದ್ದಾರೆ ಅದಕ್ಕಿಂತ ಹಾನಿ ಹೆಚ್ಚಾಗಿದೆಯೆ?

ಶ್ರೀ ಎಸ್.ಆರ್. ಬೊಮ್ಮಾಯಿ —ಮಾನ್ಯ ಸದಸ್ಯರ ಆತಂಕವನ್ನು ಅರ್ಥ ಮಾಡಿಕೊಂಡಿದ್ದೇನೆ ಇದುವರೆಗೆ ಈ ಇಲಾಖೆಯಲ್ಲಿ ಜಾಗೃತ ಯೂನಿಟ್ ಇಲ್ಲದೇ ಇದ್ದುದರಿಂದ ಎಷ್ಟು ಕಳ್ಳಸಾಗಾಣಿಕೆ ಯಾಗಿರುತ್ತಿದೆ ಎಂದು ಕಂಡುಹಿಡಿಯುವುದಕ್ಕೆ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಎಷ್ಟು ಹಾನಿಯಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ.

ಶ್ರೀ ಜೆ.ಎಸ್. ದೊಡ್ಡಮೇಟಿ —ಮೊದಲಿನಿಂದ ಈ ರೀತಿ ನಡೆದುಕೊಂಡು ಬಂದಿದೆ. ೧೯೭೯ನೇ ಇಸವಿಯೊಳಗೆ ೪,೩೫,೮೧೫ ರೂಪಾಯಿಗಳು, ೧೯೮೦ನೇ ಇಸವಿಯೊಳಗೆ ೯,೫೪,೮೦೩ ರೂಪಾಯಿಗಳು, ೧೯೮೧ನೇ ಇಸವಿಯೊಳಗೆ ೮,೨೨,೦೫೯ ರೂಪಾಯಿಗಳು, ಹೀಗೆ ಒಟ್ಟು ೨೨,೦೨,೬೭೭ ರೂಪಾಯಿಗಳು ನಮ್ಮ ಸರ್ಕಾರದ ಖಜಾನೆಗೆ ಸಂದಾಯವಾಗಿದೆ ಎಂದು ತಿಳಿದು ಬಂದಿದೆ. ಆದುದರಿಂದ ಈ ರಾಯಲ್ಟಿ ಏನು ಇದೆ ಇದನ್ನು ಹೆಚ್ಚಿಸಲು ಏನಾದರೂ ಬಿಗಿ ಕ್ರಮಗಳನ್ನು ತೆಗೆದುಕೊಂಡಿದ್ದೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಮಾಹಿತಿಯ ಅಂಕೆಸಂಖ್ಯೆ ಸರಿಯಿಲ್ಲ. ೧೯೭೯ ರಿಂದ ೧೯೮೩ ರವರೆಗೆ ೬೮,೯೯,೫೧೬ ರೂಪಾಯಿಗಳು ಸಂದಾಯವಾಗಿದೆ. ಇದನ್ನು ಹೆಚ್ಚಿಸಲು ಸರ್ಕಾರ ನಿರ್ಣಯ ತೆಗೆದುಕೊಂಡಿದೆ ಮತ್ತು ಈ ಬಗ್ಗೆ ಆಜ್ಞೆಯನ್ನು ಹೊರಡಿಸಿದೆ.

ಶ್ರೀ ಜೆ.ಎಸ್. ದೊಡ್ಡಮೇಟಿ.—೧೯೭೯ ರಲ್ಲಿ ರಾಷ್ಟ್ರೀಕರಣಕ್ಕೆ ಸಂಬಂಧಪಟ್ಟಂಥ ತಿದ್ದುಪಡಿಯನ್ನು ತರಬೇಕು ಎನ್ನುವುದು ಸರ್ಕಾರದ ಗಮನದಲ್ಲಿತ್ತು. ಆದನ್ನು ಏನಾದರೂ ಅಮಲಿನಲ್ಲಿ ತರುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ನಂಜನಗೂಡು ತಾಲ್ಲೂಕಿನಲ್ಲಿ ಆನೆ ಹಾಗೂ ಹಂದಿಗಳ ಹಾವಳಿಯ ಬಗ್ಗೆ.

೨೭೩. ಶ್ರೀ ಎಂ. ಮಹದೇವ್ (ನಂಜನಗೂಡು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ತಾಲ್ಲೂಕು ನಾಗಣಾಪುರ ಗ್ರಾಮದ ಸುತ್ತ ಮುತ್ತಲಲ್ಲಿ ಆನೆಗಳ ಹಂತ್ತು ಹಿಂದಿಗಳ ಹಾವಳಿಯಿಂದ ಫಸಲು ನಷ್ಟವಾಗಿ ಪರಿಹಾರ ಕೊಡಲು ಇಲಾಖಾ ಅಧಿಕಾರಿಗಳು ಅನವಶ್ಯಕವಾಗಿ ತೊಂದರೆ ಕೊಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತಾಲ್ಲೂಕಿನ ಹಳ್ಳಿಗಳಲ್ಲಿ ಈ ಕಾರಣದಿಂದಾಗಿ ಪರಿಹಾರಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಇದುವರೆಗೂ ಎಷ್ಟು ಮಂದಿ ಅರ್ಜಿದಾರರಿಗೆ ಪರಿಹಾರವನ್ನು ಸರ್ಕಾರದವರು ಕೊಟ್ಟಿರುತ್ತಾರೆ;

ಈ) ಸರ್ಕಾರದವರ ಪರಿಶೀಲನೆಯಲ್ಲಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಬಿ.ಎ. ಜೀವಿಜಯ(ಅರಣ್ಯ ರಾಜ್ಯ ಮಂತ್ರಿಗಳು).—

(ಅ(ಇಲ್ಲ.

(ಆ) ಆನೆಗಳ ಹಾವಳಿಯಿಂದ ಫಸಲು ನಷ್ಟ ಹೊಂದಿರುವ ಬಗ್ಗೆ ಗ್ರಾಮಸ್ಥರಿಂದ ಬಂದಿರುವ ಅರ್ಜಿಗಳ ವಿವರ ಈ ಕೆಳಕಂಡಂತಿದೆ :

ವರ್ಷ	ಸಂಖ್ಯೆ
೧೯೮೧–೮೨	೩
೧೯೮೨–೮೩	೧೩
೧೯೮೩–೮೪	೫
ಒಟ್ಟು :	೨೧

ಕಾಡು ಹಂದಿಗಳಿಂದ ಉಂಟಾದ ಹಾನಿಗೆ ಪರಿಹಾರ ಕೊಡಲಾಗುವುದಿಲ್ಲ.

(ಇ) ಈವರೆಗೆ ೧೮ ಮಂದಿಗೆ ಪರಿಹಾರ ಧನ ಮಂಜೂರು ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ :

ವರ್ಷ	ನಂ.	ಮಂಜೂರಾದ ಹಣ
೧೯೮೧–೮೨	೩	ರೂ. ೩೩೮೦.೦೦
೧೯೮೨–೮೩	೧೩	ರೂ. ೫೩೧೭.೦೦
೧೯೮೩–೮೪	೨	ರೂ. ೧೨೫೦.೦೦
ಒಟ್ಟು	೧೮	ರೂ. ೯೯೪೭.೦೦

(ಈ) ೩.

ಈಗ ಒಂದು ಬಾಕಿ ಇದೆ.

ಎಂ. ಮಹದೇವ್.—ಇಲ್ಲಿ ಬಾಗಿ ಹೋಗಿದೆಯೋ, ತೆಂಗಿನ ಗಿಡಗಳು ಹೋಗಿದೆಯೋ ಎಂದು ಹೇಳಲಿಲ್ಲ, ಒಟ್ಟಿನಲ್ಲಿ ಫಸಲು ನಷ್ಟ ಹೊಂದಿದೆ.ಎಂದು ಹೇಳಿದ್ದೀರಿ. ಒಂದು ವರ್ಷದಲ್ಲಿ ಮೂರು ಜನರ ಮೇಲೆ ಆನೆಗಳು ಹಾವಳಿ ಮಾಡಿರುವುದು ಎಂದು ಕೊಟ್ಟಿದ್ದೀರಿ. ನಾನು ಆ ಕ್ಷೇತ್ರಕ್ಕೆ ಹೋಗಿ ಪ್ರವಾಸ ಮಾಡಿಕೊಂಡು ಬಂದಿದ್ದೇನೆ ಇದರಿಂದ ಬಹಳ ಕಷ್ಟವಾಗಿದೆ, ರೈತರು ಪದೇ ಪದೇ ಬಂದು ತಮ್ಮ ಕಷ್ಟಗಳನ್ನು ಹೇಳುತ್ತಾ ಇರುತ್ತಾರೆ. ಸುಮಾರು ೫೦ ಗ್ರಾಮಗಳು ಆ ಕಾಡಿನ ಪಕ್ಕದಲ್ಲಿವೆ.

ಒಂದು ಹುಲ್ಲಿನ ಮೆದೆ ಅಂದರೆ ೪ ಮೋಟರ್ ೩ ಮೋಟರ್ ಇರುತ್ತದೆ. ಅದೊಂದು ಫಸಲನ್ನು ಮಾರಿದರೆ ೧೫ ಸಾವಿರ ರೂಪಾಯಿ ರೈತರಿಗೆ ಬರುತ್ತದೆ. ೧೫ ಸಾವಿರ ರೂಪಾಯಿಗಳು ಬೆಲೆ ಬಾಳತಕ್ಕ ಫಸಲು ನಷ್ಟವಾಗುತ್ತದೆ. ತೆಂಗಿನ ಗಿಡಗಳು ೨೦-೩೦ ನಷ್ಟವಾಗಿದೆ. ೧೯೮೨-೮೩ ರಲ್ಲಿ ೩ ಜನ ೧೯೮೩-೮೪ ರಲ್ಲಿ ೧೩ ಜನ ಮತ್ತು ೧೯೮೩-೮೪ರಲ್ಲಿ ೫ ಜನ ಒಟ್ಟು ೨೧ ಜನ ಆನೆಗಳ ಹಾವಳಿಯಿಂದ ಸತ್ತಿದ್ದಾರೆ ಎಂದು ಹೇಳಿದ್ದೀರಿ. ಒಂದೊಂದು ಮನೆಗೆ ಮೂರು ಮೂರು ಎಂದು ಲೆಕ್ಕ ಹಾಕಿದರೂ ಬಡಪಟ್ಟು ನಷ್ಟವಾಗಿದೆ. ರೈತರು ಅಧಿಕಾರಿಗಳಿಗೆ ದೂರನ್ನು ಕೊಟ್ಟು ತಕ್ಷಣ ಅದನ್ನು ಪರಿಶೀಲನೆಮಾಡಿ ಕ್ರಮ ತೆಗೆದುಕೊಳ್ಳುವುದಿಲ್ಲ. ರೈತರಿಗೆ ತಿರುಗಿ ತಿರುಗಿ ಬೇಜಾರಾಗಿ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಡಬೇಕು. ರೈತರು ಆರ್ಜಿ ಕೊಟ್ಟು ಕೂಡಲೇ ಒಂದೆರಡು ದಿನಗಳಲ್ಲಿ ಮಹಜರ್ ಮಾಡಿ ಕ್ರಮ ತೆಗೆದುಕೊಳ್ಳಲಿಕ್ಕೆ ತಾವು ವ್ಯವಸ್ಥೆ ಮಾಡಿಕೊಡುತ್ತೀರಾ? ಮತ್ತೆ ತೆಂಗಿನ ಸಸಿಗಳು ರೀಸೆಂಟಾಗಿ ಪಿಲ್ಲೆ ತಿಂಗಳಲ್ಲಿ ಕೆಟ್ಟಿವೆ ಎಂದು ೪ ಗ್ರಾಮಗಳಿಂದ ಆರ್ಜಿಗಳು ಹೋಗಿವೆ. ಆದರೂ ರೈತರ ಆರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಂಡಿಲ್ಲ. ರೈತರು ಆರ್ಜಿ ಕೊಟ್ಟ ಕೂಡಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಡಿ. ಮತ್ತು ಆಕ್ಟ್ಟುಮುಲ್ಲಾಗಿ ಫಸಲು ಎಷ್ಟು ಹೋಗಿದೆ ಅದಕ್ಕೆ ಪರಿಹಾರ ಕೊಡಲಿಕ್ಕೆ ಸರ್ಕಾರ ವ್ಯವಸ್ಥೆ ಮಾಡಿಕೊಡುತ್ತದೆಯೇ? ಮತ್ತು ರೈತರುಗಳ ಮನೆ ಬಾಗಿಲಿಗೆ ಅರಣ್ಯಾಧಿಕಾರಿಗಳು ಹೋಗಿ ಯೋಗ್ಯ ರೀತಿಯಿಂದ ವಿಚಾರಿಸಿ ಅಲ್ಲಿ ರಿಕಾರ್ಡಗಳನ್ನು ಮಾಡಲಿಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಈಗ ಅರಣ್ಯ ಇಲಾಖೆಗೆ ಯಾವ ಯಾವ ಪ್ರಕರಣಗಳು ಬಂದಿವೆ ಅವುಗಳಿಗೆ ಪರಿಹಾರ ಕೊಡಲಾಗಿದೆ. ನಿರ್ದಿಷ್ಟವಾದ ಪ್ರಕರಣಗಳಿಗೆ ವಿಂಡಿತವಾಗಿ ಗಮನ ಕೊಡುತ್ತೇವೆ. ರೈತರ ಮನೆ ಬಾಗಿಲಿಗೆ ಹೋಗಬೇಕು ಎಂಬ ಉತ್ತಮ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಇದನ್ನು ಪರಿಶೀಲಿಸುತ್ತೇನೆ. ಆನೆಗಳ ಕಾಟವನ್ನು ತಪ್ಪಿಸಲಿಕ್ಕೆ ಕಳೆದ ವರ್ಷ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ವರ್ಷ ಎನ್.ಆರ್.ಇ.ಪಿ.ಯಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕು ಎಂದು ಶ್ರೀಮತಿ ನಾಗರತ್ನಮ್ಮನವರೂ ಕೂಡ ಮೊನ್ನೆ ಹೇಳಿದರು. ಹೆಚ್ಚಿನ ಹಣ ಕೊಟ್ಟು, ಆನೆಗಳ ಹಾವಳಿಯನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಹದೇವ್.—ಆನೆಗಳು ಬರದಹಾಗೆ ಸುತ್ತಲು ಕಂದಕ ಹೊಡೆಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ — ಆನೆಗಳನ್ನು ಓಡಿಸುವುದಕ್ಕೆ ಪಟಾಕಿಗಳನ್ನು ಕೊಡುತ್ತಿದ್ದೇವೆ. ಅರಣ್ಯ ಪ್ರದೇಶಗಳಲ್ಲಿ ಲೈಟುಗಳನ್ನು ಕೂಡ ತಪ್ಪಿಸಲಿಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಗೋವಿಂದ ಗೌಡ.—ನಮ್ಮ ಭಾಗದಲ್ಲಿ ಕೂಡ ಹಂದಿಗಳು ಬೆಳೆಯನ್ನೆಲ್ಲಾ ಹಾಳು ಮಾಡುತ್ತವೆ. ಅವುಗಳನ್ನು ಶಿಕಾರಿ ಮಾಡುವುದಕ್ಕೆ ಅವಕಾಶ ಕೊಡುತ್ತೀರ ?

SRI B. A JIVIJAJA—That animal has not been declared as vermin ಶ್ರೀ ಲೈಸೆನ್ಸ್ ಕೊಟ್ಟರೆ ಇದೇ ಸಂತತಿಯನ್ನೇ ಜನರು ಹಾಳುಮಾಡುತ್ತಾರೆ. ಅದಕ್ಕೋಸ್ಕರ ಲೈಸೆನ್ಸ್ ಕೊಟ್ಟಿಲ್ಲ, They can scare away the animal.

ಕೃಷ್ಣರಾಜನಗರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಬಗ್ಗೆ

೨೬೨. ಶ್ರೀ ಎಸ್. ಸಂಜಪ್ಪ (ಕೃಷ್ಣರಾಜನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರವು ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಗುರುತಿಸಿದೆಯೇ ?

(ಆ) ಸರ್ಕಾರವು ಕೃಷ್ಣರಾಜನಗರದಲ್ಲಿ ಕೈಗಾರಿಕಾ ಪೇಟ್ಟೆಗಳನ್ನು ಕಟ್ಟಲು ಉದ್ದೇಶಿಸಿದೆಯೇ ?

(ಇ) ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಉದ್ದಿಮೆಗಳಿಂದ ಆರ್ಜಿ ಬಂದಿದೆಯೇ ?